ಇ) *ಈಗ ಸರ್ವೆ ಕೆಲಸ ಯಾವ ಹಂತದಲ್ಲಿ ಇದೆ, ಹಾಗಿದ್ದಲ್ಲಿ, ಸದರಿ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಈ ರೀತಿಯಾಗಿ ಯಾವ ಆದೇಶವೂ ಬಂದಿಲ್ಲ.

ಇ) ಸಮೀಕ್ಷಣಾ ಕಾರ್ಯವು ಪ್ರಾರಂಭಿಕ ಹಂತದಲ್ಲಿದ್ದು ಸುಮಾರು 6 ತಿಂಗಳಿನಲ್ಲಿ ಅದನ್ನು ಮುಗಿಸಲಾಗುವುದು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿ ವೀರ ಶ್ರೀ ಚೆನ್ನಪ್ಪಾ ವಾಲಿ, ಶ್ರೀ ವೆಂಕರೆಡ್ಡಿ ಹೊಲಿ ಹಾಗೂ ಶ್ರೀ ಅಣ್ಣು ಗುರೂಜಿ ಇವರ ಸ್ಮಾರಕ ಕಟ್ಟುವ ಬಗ್ಗೆ ಪ್ರಸ್ತಾಪ

279 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿ ವೀರ ಶ್ರೀ ಚೆನ್ನಪ್ಪಾ ವಾಲಿ, ಶ್ರೀ ವೆಂಕರೆಡ್ಡಿ ಹೊಲಿ ಹಾಗೂ ಶ್ರೀ ಅಣ್ಣು ಗುರೂಜಿ ಇವರ ಸ್ಮಾರಕಗಳನ್ನು ಕಟ್ಟುವ ಸಲುವಾಗಿ ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?*

ಆ) *ಈಗ ಇವರ ಸ್ಮಾರಕಗಳನ್ನು ಕಟ್ಟಲು ಯಾವ ಯಾವ ಸ್ಥಳಗಳನ್ನು ನಿರ್ದಿಷ್ಟಪಡಿಸಲಾಗಿದೆ. ಹಾಗೂ ಈಗ ಅವು ಯಾವ ಹಂತದಲ್ಲಿ ಇವೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಯಾವುದೇ ಪ್ರಸ್ತಾಪ ಸರ್ಕಾರದಲ್ಲಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಸಣ್ಣ ಕೈಗಾರಿಕೆಗಳಿಗೆ ಕೇಂದ್ರ ಹಾಗೂ ರಾಜ್ಯದ ಸಹಾಯ ಧನ ನೀಡುವುದು.

1075 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಾಕಿ ಉಳಿದಿರುವ ಕೇಂದ್ರದ ಹಾಗೂ ರಾಜ್ಯದ ಸಹಾಯಧನ ಎಷ್ಟು?*

ಆ) *ಶಿವಮೊಗ್ಗ ಜಿಲ್ಲೆಯಲ್ಲಿ ಬಾಕಿ ಯಾವ ವರ್ಷದಿಂದ ಉಳಿದಿದೆ ಹಾಗೂ ಬಾಕಿ ಸಹಾಯಧನ ಎಷ್ಟು? ಮತ್ತು ಯಾವಾಗ ಅದನ್ನು ಬಿಡುಗಡೆ ಮಾಡಲಾಗುವುದು?*

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು):

ಅ) ರಾಜ್ಯ ಸಹಾಯಧನ ರೂ. 1709.51 ಲಕ್ಷಗಳು (ದಿನಾಂಕ 1-2-91ರವರೆವಿಗೆ)

ಕೇಂದ್ರ ಸಹಾಯಧನ ರೂ. 927.37 ಲಕ್ಷಗಳು (ದಿನಾಂಕ 1-2-1991ರವರೆವಿಗೆ)

ಆ) ಶಿವಮೊಗ್ಗ ಜಿಲ್ಲೆಯಲ್ಲಿ 1-2-91ರವರೆವಿಗೆ 1986-87 ಸಾಲಿನಿಂದ ಸುಮಾರು 318 ಸಣ್ಣ ಕೈಗಾರಿಕೆಗಳಿಗೆ ರೂ. 97.43 ಲಕ್ಷಗಳ ರಾಜ್ಯ ಸಹಾಯಧನ ಬಾಕಿ ಇರುತ್ತದೆ. ಈ ಜಿಲ್ಲೆಯಲ್ಲಿ ಕೇಂದ್ರ ಸಹಾಯಧನ ನೀಡುತ್ತಿಲ್ಲವಾದ್ದರಿಂದ ಬಾಕಿ ಇರುವುದಿಲ್ಲ.

ಬಾಕಿ ಇರುವ ರಾಜ್ಯ ಸಹಾಯ ಧನವನ್ನು ಆದಷ್ಟು ಶೀಘ್ರವಾಗಿ ಬಿಡುಗಡೆ ಮಾಡುವ ಕುರಿತು ಸರ್ಕಾರವು ಪರಿಶೀಲಿಸುತ್ತದೆ.